ದಿನಾಂಕಃ 04-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 2 ನೇ ಎದುರುದಾರರ ಪರವಾಗಿ ಶ್ರೀ. ಎಂ.ಇ.ಎನ್. ವಕೀಲರಿಂದಃ-**

ನನಗೆ 57 ವರ್ಷ ವಯಸ್ಸಾಗಿರುತ್ತದೆ ಎಂದರೆ ಸಾಕ್ಷಿಯು, ನನಗೆ 47 ವರ್ಷ ವಯಸ್ಸಾಗಿದೆ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಫ್ರಾಸಾ.1 ರವರ ದ್ವಿಚಕ್ರ ವಾಹನದಲ್ಲಿ ಹಿಂಬದಿ ಸವಾರನಾಗಿ ಕಂಪನಿಯ ಕೆಲಸಕ್ಕೆ ಹೋಗಲು ಹೋಗುತ್ತಿದ್ದೆನು. ಫ್ರಾಸಾ.1 ರವರು ನನಗೆ ಸುಮಾರು 20 ವರ್ಷದಿಂದ ಪರಿಚಯಸ್ಥರು. ನಾನು ಹೋಗುತ್ತಿದ್ದ ಬೈಕ್ ನಂಬರ್ ನನಗೆ ಗೊತ್ತಿಲ್ಲ. ಈ ಅಪಘಾತ ಮಧುಗಿರಿಯ ಡಿ.ಡಿ.ಪಿ.ಐ. ಕಚೇರಿಯ ಹತ್ತಿರ ಆಗಿರುತ್ತದೆ. ಆ ದಿನ ಫ್ರಾಸಾ.1 ರವರು ದ್ವಿಚಕ್ರ ವಾಹನವನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆ ದಿನ ಫ್ರಾಸಾ.1 ರವರು ಎದುರುಗಡೆಯಿಂದ ಬರುತ್ತಿದ್ದ ವಾಹನಗಳನ್ನು ಗಮನಿಸದೇ ಅತಿ ವೇಗವಾಗಿ ಹೋಗಿ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನಾವು ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಒಂದು ಶಾಲೆ ಬಸ್ ಬಂದು ಮುಂಭಾಗದ ಚಕ್ರಕ್ಕೆ ಡಿಕ್ಕಿಪಡಿಸಿತು ಈ ಅಪಘಾತದಿಂದ ನನ್ನ ಎಡತೋಳಿಗೆ ಗಾಯಗಳಾಗಿ ರಾಡ್ ಅಳವಡಿಸಲಾಗಿರುತ್ತದೆ. ಈ ಅಪಘಾತವಾದ ರಸ್ತೆ ತಿರುವಿನಿಂದ ಕೂಡಿರುತ್ತದೆ. ಈ ಅಪಘಾತ ಫ್ರಾಸಾ.1 ರವರ

ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಸಂಬಂಧಪಟ್ಟ ಪೊಲೀಸರು ನನ್ನ ಹೇಳಿಕೆ ಪಡೆದರು. ಅಪಘಾತವಾದ ನಂತರ ನಾನು ಮಧುಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಇ.ಎಸ್.ಐ. ಆಸ್ಪತ್ರೆಗೆ ಹೋದೆನು.

ನಾನು ತುಮಕೂರಿನ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿ ತಿಂಗಳಿಗೆ ರೂ.30,000/- ಸಂಬಳ ಪಡೆಯುತ್ತಿದ್ದೆನು. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಇ.ಎಸ್.ಐ. ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಹೊರಗಡೆಯಿಂದಲೂ ಸಹ ಕೆಲವು ಔಷಧಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. ನನಗೆ ಅಪಘಾತವಾದ ಸ್ಥಳದಲ್ಲಿ ಈಗ ಕೂಡಿಕೊಂಡಿರುತ್ತದೆ. ನನಗೆ ಇ.ಎಸ್.ಐ. ಆಸ್ಪತ್ರೆಯಲ್ಲಿ ರಾಡ್ ಅಳವಡಿಸಲಾಗಿರುತ್ತದೆ. ನನಗೆ ಇ.ಎಸ್.ಐ. ಆಸ್ಪತ್ರೆಯಲ್ಲಿ ಉಚಿತವಾಗಿ ರಾಡ್ನ್ನು ತೆಗೆಯಲು ಅವಕಾಶ ಇದೆ ಎಂದರೆ ಸಾಕ್ಷಿಯು ನಾನು ಈಗ ಕೆಲಸಕ್ಕೆ ಹೋಗದೇ ಇರುವುದರಿಂದ ಈ ಬಗ್ಗೆ ಅವಕಾಶ ಇಲ್ಲ ಎಂದು ಸ್ವತಃ ನುಡಿಯುತ್ತಾರೆ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದರಿಂದ ಉಚಿತವಾಗಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ಹಿಂದಿನಂತೆಯೇ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ

ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ